ಶ್ರೀ ಸಿ.ಎನ್. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ನೀರಾವರಿ ಸಚಿವರು ಇಲ್ಲ, ನಮ್ಮ ಹಾಸನ ಜಿಲ್ಲೆಯ ಉಸ್ತುವಾರಿ ಸಚಿವರಾದ ಮಹದೇವಪ್ಪನವರು ಇದ್ದಾರೆ, ಅವರನ್ನು ಕೇಳಿ.

ಅಧ್ಯಕ್ಷರು:– ಸಚಿವರು ಇಲ್ಲವಲ್ಲ. ಇದನ್ನು ನಾಳೆ ಹಾಕೋಣ.

ಶ್ರೀ ಸಿ.ಎನ್. ಬಾಲಕೃಷ್ಣ:– ನಾಳೆ ಅವಕಾಶ ಇರುತ್ತದೆಯೇ?

ಅಧ್ಯಕ್ಷರು:– ನಾಳೆಗೆ ಹಾಕೋಣ.

ಬಯೋಮೆಟ್ರಿಕ್ ಅಳವಡಿಸುವುದು

229(3472); ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ)

ಅ) ರಾಜ್ಯ ಸರ್ಕಾರಿ ಕಛೇರಿಯ ನೌಕರರ ಹಾಜರಾತಿಯ ಪರಿಶೀಲನೆಗಾಗಿ ಬಯೋಮೆಟ್ರಿಕ್ ತಂತ್ರಾಂಶವನ್ನು ಕಡ್ಡಾಯಗೊಳಿಸಿ ಎಲ್ಲಾ ಕಛೇರಿಗಳಲ್ಲೂ ಸಂಬಂಧಿಸಿದ ಉಪಕರಣಗಳನ್ನು ಅಳವಡಿಸಲು ಸಾಕಷ್ಟು ಅನುದಾನವನ್ನು ವೆಚ್ಚ ಮಾಡಿದ್ದರೂ ಕಾರ್ಕಳ ತಾಲ್ಲೂಕು ಕಛೇರಿಯ ಬಯೋಮೆಟ್ರಿಕ್ ವ್ಯವಸ್ಥೆಯು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸ್ಥಗಿತಗೊಂಡಿದ್ದಲ್ಲಿ, ಹಾಜರಾತಿಯ ಪರಿಶೀಲನೆಯನ್ನು ಯಾವ ರೀತಿ ಮಾಡಲಾಗುತ್ತಿದೆ;

ಇ) ನಿಯಮಾನುಸಾರ ಬಯೋಮೆಟ್ರಿಕ್ ತಂತ್ರಾಂಶಕ್ಕೂ ಹೆಚ್.ಆರ್.ಎಂ.ಎಸ್ ತಂತ್ರಾಂಶಕ್ಕೂ ಸಂಬಂಧ ಕಲ್ಪಿಸಿಲ್ಲವೇ ? (ವಿವರ ನೀಡುವುದು)

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿಯವರ ಕಛೇರಿ, ಉಪ ವಿಭಾಗಾಧಿಕಾರಿಗಳ ಕಛೇರಿ, ಹಾಗೂ ಎಲ್ಲಾ ತಾಲ್ಲೂಕು ಕಛೇರಿಗಳಲ್ಲಿ

ಬಯೋಮೆಟ್ರಿಕ್ ವ್ಯವಸ್ಥೆಯೊಂದಿಗೆ ಹಾಜರಾತಿಯನ್ನು ಪಡೆಯಲಾಗುತ್ತಿದೆ. ಆದರೆ ಕಾರ್ಕಳ ತಾಲ್ಲೂಕಿನಲ್ಲಿ ಮಾತ್ರ ಇತ್ತೀಚೆಗೆ ಈ ಬಯೋಮೆಟ್ರಿಕ್ ಯಂತ್ರದಲ್ಲಿ ತಾಂತ್ರಿಕ ದೋಷದಿಂದಾಗಿ ತಾತ್ಕಾಲಿಕವಾಗಿ ಇ-ಹಾಜರಾತಿ ಅನುಷ್ಠಾನ ಸ್ಥಗಿತಗೊಂಡಿದ್ದು, ಬಯೋಮೆಟ್ರಿಕ್ ಯಂತ್ರವನ್ನು ಸರಿಪಡಿಸಲಾಗಿದೆ.

ಆ) ಬಯೋಮೆಟ್ರಿಕ್ ಯಂತ್ರವು ಸ್ಥಗಿತಗೊಂಡ ಅವಧಿಯಲ್ಲಿ ಹಾಜರಾತಿ ಪುಸ್ತಕವನ್ನು ನಿರ್ವಹಿಸಿ ಇದರಲ್ಲಿ ಹಾಜರಾತಿ ಪಡೆಯಲಾಗಿದೆ.

ಇ) ಸರ್ಕಾರದ ನಿಯಮಾನುಸಾರ ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ರೂಪಿಸಿದ್ದು, ಇದರಲ್ಲಿ ಬಯೋಮೆಟ್ರಿಕ್ ಮುಖಾಂತರ ಹಾಜರಾತಿಯನ್ನು ಪಡೆಯುವ ವ್ಯವಸ್ಥೆಯನ್ನು ರೂಪಿಸಿರುವುದಿಲ್ಲ.

ಶ್ರೀ ವಿ. ಸುನೀಲ್ ಕುಮಾರ್:- ಮಾನ್ಯ ಅಧ್ಯಕ್ಷರೆ, ಕಾರ್ಕಳದಲ್ಲಿ ಬಯೋಮೆಟ್ರಿಕ್ ದೋಷ ಕಾಣಿಸಿಕೊಂಡು ಒಂದು ವರ್ಷವಾಗಿದೆ. ಇದನ್ನು ಯಾವಾಗ ದುರಸ್ತಿ ಮಾಡುತ್ತೀರಿ? ಇದನ್ನು ದುರಸ್ತಿ ಮಾಡದೇ ಇರುವ ಪರಿಣಾಮ ಅಧಿಕಾರಿಗಳು ಯಾವಾಗ ಬರುತ್ತಾರೆ, ಯಾವಾಗ ಬರುವುದಿಲ್ಲವೆಂಬ ಪರಿಸ್ಥಿತಿಯಾಗಿದೆ. ಹಾಗಾಗಿ ಇದನ್ನು ಯಾವಾಗ ದುರಸ್ತಿ ಮಾಡಿ re-set ಮಾಡುತ್ತೀರೆಂಬುದನ್ನು ಮಾನ್ಯ ಮಂತ್ರಿಯವರು ಸ್ಪಷ್ಟಪಡಿಸಬೇಕು.

ಅಧ್ಯಕ್ಷರು:- ಅದನ್ನು ರಿಪೇರಿ ಮಾಡುವುದಕ್ಕೆ ಅಮೇರಿಕಾದಿಂದ technology ಬರಬೇಕಲ್ಲವೆ?!

ಶ್ರೀ ವಿ. ಶ್ರೀನಿವಾಸ ಪ್ರಸಾದ್:- ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಬಯೋಮೆಟ್ರಿಕ್‌ನಲ್ಲಿ ತಾಂತ್ರಿಕ ದೋಷಗಳು ಇದ್ದೆ ಇರುತ್ತವೆ. ಈಗಾಗಲೇ ಬಯೋಮೆಟ್ರಿಕ್ ಯಂತ್ರವನ್ನು ಸರಿಪಡಿಸಲಾಗಿದೆ.

ಶ್ರೀ ವಿ. ಸುನೀಲ್ ಕುಮಾರ್:- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಅದಲ್ಲ. ಬಯೋಮೆಟ್ರಿಕ್ ಅನ್ನು ಯಾರು ದುರಸ್ತಿ ಮಾಡುವುದು?

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಈಗ ಬಯೋಮೆಟ್ರಿಕ್ ಯಂತ್ರವನ್ನು ಸರಿಪಡಿಸಲಾಗಿದೆ. ಆದರೆ ಈಗ ಅದು ಕೆಟ್ಟು ಹೋಗಿರುವ ಸಂದರ್ಭದಲ್ಲಿ ಹಾಜರಾತಿ ಪುಸ್ತಕವನ್ನು ಇಟ್ಟಿರುವಂಥದ್ದು. ಅದನ್ನು ಸರಿಪಡಿಸುವುದಕ್ಕೂ ಹೇಳಿದ್ದೇವೆ. ಅಲ್ಲಿ ನಿಮಗೆ ಆಗಬೇಕಾಗಿರುವಂಥದ್ದು, ತಾವು ಕೊನೆಗೆ ಪ್ರಶ್ನೆಯನ್ನು ಏನು ಕೇಳಿದ್ದೀರಿ. ಸರ್ಕಾರದ ನಿಯಮಾನುಸಾರ H.R.M.S. ಅಂದರೆ Human Resource Management System ಏನು ಇದೆ. ಅದನ್ನು ಬಯೋಮೆಟ್ರಿಕ್ ಮುಖಾಂತರ ಹಾಜರಾತಿ ಪಡೆಯುವುದನ್ನು ಇನ್ನೂ ರೂಪಿಸಿಲ್ಲ. ಅದು ಕೂಡ ಆಗುತ್ತಿದೆ, ಏಕೆಂದರೆ ಆಯಾ department ನವರೆ ಈ ಬಯೋಮೆಟ್ರಿಕ್ ಸಿಸ್ಟಂ ಮತ್ತು ಹೆಚ್.ಆರ್.ಎಂ.ಎಸ್. ಇವೆಲ್ಲವನ್ನೂ ಮಾಡಬೇಕು. ಅದರ ಬಗ್ಗೆಯೂ ಹೇಳಿದ್ದೇವೆ, ತಕ್ಷಣದಲ್ಲಿ ಅದೂ ಕೂಡ ಆಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ವ್ಯವಸ್ಥಿತವಾಗಿ ಬಯೋಮೆಟ್ರಿಕ್ ಸಿಸ್ಟಂ ಅನ್ನು ಹಾಳು ಮಾಡುವುದಕ್ಕೆ ಒಂದು ವ್ಯವಸ್ಥೆ ಇದೆ.

ಶ್ರೀ ವಿ. ಸುನೀಲ್ ಕುಮಾರ್:– ಸರ್ಕಾರಿ ಕಛೇರಿಗಳಲ್ಲಿ ಬಯೋಮೆಟ್ರಿಕ್ ಕೆಲಸ ಮಾಡುತ್ತಿಲ್ಲ. ಅಧಿಕಾರಿಗಳು ಯಾವಾಗ ಬೇಕೋ ಆಗ ಬಂದು ಹೋಗುತ್ತಾರೆ, ಈ ವ್ಯವಸ್ಥೆಯನ್ನು ಸರಿ ಮಾಡುವುದು ಹೇಗೆ? ಬಯೋಮೆಟ್ರಿಕ್‌ನ concept ಹಾಳಾಗಿದೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಏನು ಆಗಬೇಕು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಅದನ್ನು ವ್ಯವಸ್ಥಿತವಾಗಿ ಹಾಳು ಮಾಡುವುದಕ್ಕೆ ಒಂದಿಷ್ಟು ಯೋಜನೆಗಳಿವೆ. ಏಕೆಂದರೆ, ಅವರು ಯಾವ ಟೈಮ್‌ಗೆ ಬಂದು ಹೋದರೆನ್ನುವುದು ಎಲ್ಲೂ ದಾಖಲೆಗಳಲ್ಲಿ ಸಿಗಬಾರದೆಂದು ಈ ರೀತಿ ವ್ಯವಸ್ಥಿತವಾಗಿ ಹಾಳು ಮಾಡುತ್ತಾರೆ. ಅದನ್ನು ಸರಿಮಾಡುವ ಇಚ್ಛಾಶಕ್ತಿಯನ್ನು ತೋರಿಸಬೇಕೆಂದು ಅಷ್ಟೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಮಾನ್ಯ ಅಧ್ಯಕ್ಷರೆ, politically, ಪ್ರತಿ ಅಂಶದಲ್ಲೂ ಇಚ್ಛಾಶಕ್ತಿ ಅವೆಲ್ಲಾ ಮಾತನಾಡಬಾರದು. ಎಲ್ಲದಕ್ಕೂ ಪದಗಳಿವೆಯೆಂದು ಬಳಸುತ್ತೇವೆಂದು ಮಾಡಬಾರದು, ಈಗ ಕಾರ್ಕಳದಲ್ಲಿ ದೋಷವುಂಟಾಗಿದೆ, ಅದನ್ನು ಸರಿಪಡಿಸಬೇಕು, ಮಾಡುತ್ತಿದ್ದೇವೆ, ಏನು ಭಾಷಣಗಳನ್ನು ಮಾಡುತ್ತೀರಿ?

ಶ್ರೀ ವಿ. ಸುನೀಲ್ ಕುಮಾರ್:– ಮಾನ್ಯ ಮಂತ್ರಿಯವರೆ, ಯಾವಾಗ ಸರಿಪಡಿಸುತ್ತೀರಿ? ನಮ್ಮ ತಾಲ್ಲೂಕು ಕಚೇರಿಯಲ್ಲಿ ಬಯೋಮೆಟ್ರಿಕ್ ಹಾಳಾಗಿ ಒಂದು ವರ್ಷವಾಯಿತು. ಅದನ್ನು ದುರಸ್ತಿ ಮಾಡುವುದಕ್ಕೆ ಎಷ್ಟು ದಿವಸ ಬೇಕೆಂಬುದನ್ನು ಸ್ಪಷ್ಟ ಮಾಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ಈಗ ಸದನದಲ್ಲಿ ಪ್ರಶ್ನೆ ಮಾಡಿದ್ದೀರಿ. ನಾವು ತಕ್ಷಣದಲ್ಲಿ ಇದು ಹೇಳಿದ್ದೇವೆ, ಮತ್ತೆ ಅವರಿಗೆ ಹೇಳಿ ತಕ್ಷಣದಲ್ಲೆ ಸರಿ ಮಾಡಿಸಿಕೊಡುತ್ತೇವೆ.

230(3161); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ

(ಮಾನ್ಯ ಸದಸ್ಯರು ಗೈರು ಹಾಜರಿದ್ದರು)

ಸುಸಜ್ಜಿತ ಕ್ರೀಡಾಂಗಣ

231(1593); ಶ್ರೀ ಜಗದೀಶ್ ಕುಮಾರ್ ಆರ್. (ಹೆಬ್ಬಾಳ)

ಅ) ಹೆಬ್ಬಾಳ ವಿಧಾನಸಭಾ ಕ್ಷೇತ್ರದಲ್ಲಿ ಸಾರ್ವಜನಿಕರಿಗೆ/ ಕ್ರೀಡಾಪಟುಗಳಿಗೆ ಅನುಕೂಲವಾಗುವಂತೆ ಸುಸಜ್ಜಿತ ಕ್ರೀಡಾಂಗಣವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಪ್ರತಿಯೊಂದು ವಿಧಾನ ಸಭಾ ಕ್ಷೇತ್ರಕ್ಕೂ ಒಂದೊಂದು ಸುಸಜ್ಜಿತ ಕ್ರೀಡಾಂಗಣವನ್ನು ಒದಗಿಸುವ ಬಗ್ಗೆ ಸರ್ಕಾರವು ಕ್ರಮ ಕೈಗೊಳ್ಳುವುದೇ?